**ಸಾಕ್ಷಿಯನ್ನು ದಿಃ02.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.
2. ನನ್ನ ಮನೆಯ ವ್ಯವಹಾರವನ್ನು ನಮ್ಮ ತಂದೆ ಕರಿಗೌಡರೇ ಮಾಡುತ್ತಿದ್ದಾರೆ. ಕರಿಗೌಡರು ಆರೋಗ್ಯವಾಗಿದ್ದಾರೆ ಎಂದರೆ ಸರಿ.
3. ಈ ದಾವೆಯನ್ನು ಹುಚ್ಚೇಗೌಡರು ಜಗದೀಶ ಮತ್ತು ದಶರಥ ರವರ ಮೇಲೆ ಹಾಕಿದ್ದಾರೆ.
4. ಹುಚ್ಚೇಗೌಡರ ತಂದೆ ಹೆಸರು ಕಳಸೇಗೌಡ. ಕಳಸೇಗೌಡರ ತಂದೆ ಹೆಸರು ಸಣ್ಣೇಗೌಡ.
5. ನನ್ನ ತಾತನ ಹೆಸರು ಸಂಬ್ರೇಗೌಡ.

6. ಹುಚ್ಚೇಗೌಡರು ನನಗೆ ಸಂಬಂಧದಲ್ಲಿ ಏನೂ ಆಗಬೇಕಾಗಿಲ್ಲ.

7. ನೀವು ಹುಚ್ಚೇಗೌಡರ ಚಿಕ್ಕಪ್ಪನ ಮಗ ಎಂದರೆ ಸರಿಯಲ್ಲ.

8. ಈ ದಾವೆಯನ್ನು ಖಾಲಿ ಜಾಗಕ್ಕೆ ಸಂಬಂಧಪಟ್ಟಂತೆ ಹಾಕಿದ್ದಾರೆ.

9. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದನ್ನು ಬರೆಸುವಾಗ ದಾಖಲಾತಿಗಳನ್ನು ನೋಡಿದ್ದೀರಾ ಎಂದರೆ, ಹುಚ್ಚೇಗೌಡರ ಹೆಸರಿನಲ್ಲಿರುವ ದಾಖಲಾತಿ ನೋಡಿದ್ದೇನೆ.

10. ಹುಚ್ಚೇಗೌಡರ ತಂದೆ ಅಥವಾ ತಾತನ ಹೆಸರಿನಲ್ಲಿರುವ ದಾಖಲಾತಿ ನಾನು ನೋಡಿಲ್ಲ.

11. ಹುಚ್ಚೇಗೌಡರ ಹೆಸರಿನಲ್ಲಿರುವ ಡಿಮ್ಯಾಂಡ್, ಕಂದಾಯ ರಶೀದಿ ನೋಡಿದ್ದೇನೆ, ಬೇರೆ ದಾಖಲಾತಿ ನೋಡಿಲ್ಲ.

12. ಹುಚ್ಚೆಗೌಡರ ತಂದೆ ಅಥವಾ ತಾತನ ಹೆಸರಿನಲ್ಲಿರುವ ದಾಖಲೆ ನೀವು ನೋಡದ ಕಾರಣ ಹುಚ್ಚೇಗೌಡರ ಪಿತ್ರಾರ್ಜಿತ ಆಸ್ತಿ ಎಂದು ಹೇಳಲು ಆಗುವುದಿಲ್ಲ ಎಂದರೆ, ಅವರೇ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ.

13. 2020 ರಲ್ಲಿ ಕೋವಿಡ್ ಕಾರಣಕ್ಕೆ ಲಾಕ್ ಡೌನ್ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ಸರ್ಕಾರದ ನಿಯಮಾವಳಿಯಂತೆ ಮಾತ್ರ ಹೊರಗಡೆ ಬರಬೇಕಿತ್ತು ಎಂದರೆ ಸರಿ, ಹಳ್ಳಿಗಳಲ್ಲಿ ಸಾಮಾನ್ಯವಾಗಿ ಓಡಾಡುತ್ತಿದ್ದರು.

14. ಡಿಮ್ಯಾಂಡ್ ನಲ್ಲಿ ಚಕ್ಕುಬಂದಿ ಹಾಗೂ ವಿಸ್ತೀರ್ಣ ಬರೆಯುವುದಿಲ್ಲ ಎಂದರೆ, ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

15. ಪೂರ್ವಕ್ಕೆ ಕೆಂಗ ಹುಚ್ಚೇಗೌಡರ ಜಮೀನು, ಪಶ್ಚಿಮಕ್ಕೇ ಪುಟ್ಟೇಗೌಡರ ಮನೆ, ದಕ್ಷಿಣಕ್ಕೆ ಓಣಿ ಹಾಗೂ ಉತ್ತರಕ್ಕೇ ರಾಜಬೀದಿ. ಸದರಿ ಚಕ್ಕುಬಂದಿಯಲ್ಲಿರುವ ಪೂರ್ವ ಪಶ್ಚಿಮ 11 ಗಜ ಹಾಗೂ ದಕ್ಷಿಣೋತ್ತರ 44 ಗಜ, ಪ್ರತಿವಾದಿಗಳ ತಂದೆ ಕರಿಗೌಡರಿಗೆ ಸೇರಿದ್ದು ಎಂದರೆ, ಹುಚ್ಚೇಗೌಡರಿಗೆ ಸೇರಿದ ಸ್ವತ್ತು. ಸದರಿ ಜಾಗದಲ್ಲಿ ಈಗಲೂ ಕರಿಗೌಡರ ಮಕ್ಕಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸದರಿ ಚಕ್ಕುಬಂದಿಯಲ್ಲಿ ಹುಚ್ಚೇಗೌಡ ಹಾಗೂ ಅವರ ವಾರಸುದಾರರು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

16. ವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ, ನೀವು ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

17. ದಾವಾ ಸ್ವತ್ತಿನಲ್ಲಿ ಹುಚ್ಚೇಗೌಡರು ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

18. ನೀವು ವಾದಿಗಳ ಸಂಬಂಧಿಕರಾದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ